International Journal of Kannada Research
www.kannadajournal.com

**ISSN: 2454–5813**
IJKR 2019; 5(1): 196-199
© 2019 IJKR
www.kannadajournal.com
Received: 12-11-2018
Accepted: 15-12-2018

**ಸೌಮ್ಯ ಜಿ.ಎಂ.**
ಸಂಶೋಧನಾ ವಿದ್ಯಾರ್ಥಿನಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು

**Correspondence**
**ಸೌಮ್ಯ ಜಿ.ಎಂ.**
ಸಂಶೋಧನಾ ವಿದ್ಯಾರ್ಥಿನಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು

# ಕನ್ನಡ ಕೈವಲ್ಯ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು

**ಸೌಮ್ಯ ಜಿ.ಎಂ.**

ಕನ್ನಡ ಸಾಹಿತ್ಯ ಚರಿತ್ರೆಯನ್ನು ಅವಲೋಕಿಸಿದಾಗ ಜೈನ ಸಾಹಿತ್ಯ, ವಚನ ಸಾಹಿತ್ಯ, ದಾಸ ಸಾಹಿತ್ಯ ಪ್ರಕಾರಗಳು ಪ್ರಧಾನವಾಗಿ ಕಂಡು ಬರುತ್ತವೆ. ಅದರಲ್ಲೂ ೧೧ನೇ ಶತಮಾನದಿಂದ ೧೯ನೇ ಶತಮಾನದವರೆಗೆ ವೀರಶೈವ ಸಾಹಿತ್ಯವು ನಾನಾ ಮುಖಿಯಾಗಿ ಸಾಹಿತ್ಯದ ಗದ್ದುಗೆ ಏರುತ್ತಲೆ ಬಂದಿರುವುದನ್ನು ಗುರುತಿಸಬಹುದು. ಈ ಸುಧೀರ್ಘ ಪರಂಪರೆಯ ಇತಿಹಾಸದಲ್ಲಿ ವೀರಶೈವ ಸಾಹಿತ್ಯವು ವಚನ ಸಾಹಿತ್ಯವಾಗಿ, ಚಂಪೂ ಸಾಹಿತ್ಯವಾಗಿ ಸ್ವರವಚನ ಸಾಹಿತ್ಯವಾಗಿ, ತತ್ವಪದ ಸಾಹಿತ್ಯವಾಗಿ, ಕೈವಲ್ಯ ಸಾಹಿತ್ಯವಾಗಿ ವಿಭಿನ್ನ ಸಾಹಿತ್ಯ ಪ್ರಕಾರಗಳ ಮೂಲಕ ಧಾರ್ಮಿಕ ಸಂದೇಶಗಳನ್ನು ನೀಡುತ್ತಲೇ ಬಂದಿದೆ.

ಭಾರತದ ಧರ್ಮಶಾಸ್ತ್ರಗಳಲ್ಲಿ, ವೇದಗಳ ಸಿದ್ಧಾಂತಗಳಲ್ಲಿ, ದ್ವೈತ, ಅದ್ವೈತ ಹಾಗೂ ವಿಶಿಷ್ಟಾದ್ವೈತ ಸಿದ್ಧಾಂತಗಳಲ್ಲಿ ಸ್ತ್ರೀಯು ಪುರುಷನನ್ನು ಮಾಯೆಯ ರೂಪದಲ್ಲಿ ಕಾಡುತ್ತಾಳೆಂದು ನಿರೂಪಿಸಿದ್ದಾರೆ. ಹಾಗೆಯೇ ಜನಮನದಲ್ಲಿ ಅದನ್ನೇ ಬಿಂಬಿಸುವ ಕೆಲಸ ಮಾಡಿದ್ದಾರೆ. ಪ್ರಾಚೀನ ಕಾಲದಲ್ಲಿ ಸ್ತ್ರೀಗೆ ಸ್ವಾತಂತ್ರ್ಯವಿತ್ತು, ಸಮಾಜದಲ್ಲಿ ಗೌರವವಿತ್ತು ಹಾಗೂ ಚರಾಸ್ತಿಯಂತೆ ನೋಡಲಾಗುತ್ತಿತ್ತೆಂದು, ಸ್ತ್ರೀಯನ್ನು ಶೂದ್ರರಿಗೆ ಸಮಾನವಾಗಿ ಕಾಣಲಾಗುತ್ತಿತ್ತೆಂದು, ಸ್ತ್ರೀಯನ್ನು ಶೋಷಿಸಲಾಗುತ್ತಿತ್ತೆಂದು ಭಿನ್ನ ಮಾದರಿಯಲ್ಲಿ ವಿದ್ವಾಂಸರ ಮತಗಳಿರುವುದನ್ನು ಕಾಣಬಹುದು. ವೈದಿಕ ಶಾಸ್ತ್ರಗ್ರಂಥಗಳಲೆಲ್ಲಾ ಹೆಣ್ಣು, ಹೊನ್ನು, ಮಣ್ಣುಗಳನ್ನೆಲ್ಲಾ ತಿರಸ್ಕಾರದಿಂದ ಕಂಡಿದ್ದಾರೆ. ಇವುಗಳ ಭೋಗ, ಸಂಗ್ರಹ ಮನುಷ್ಯನನ್ನು ಹಾದಿ ತಪ್ಪಿಸುತ್ತವೆ ಹಾಗೂ ಮೋಕ್ಷದ ಹಾದಿಗೆ ಮುಳುವಾಗುತ್ತವೆ ಎಂದು ಚಿತ್ರಿಸಿದ್ದಾರೆ.

ಹನ್ನೆರಡನೆಯ ಶತಮಾನದಲ್ಲಿ ಕಂಡುಬಂದ ವಚನ ಚಳುವಳಿಯು ಮಹಿಳೆ ಸ್ವತಂತ್ರವಾಗಿ ನಡೆದುಕೊಳ್ಳಲು ಅವಕಾಶ ಒದಗಿಸಿತು. ಇಡೀ ಸ್ತ್ರೀ ಸಮುದಾಯದ ಸಾಮಾಜಿಕ ಸ್ಥಾನಮಾನವನ್ನು ಎತ್ತಿ ಹಿಡಿದ ಕೀರ್ತಿ ಹನ್ನೆರಡನೆಯ ಶತಮಾನದ ಬಸವಾದಿ ಶರಣ ಸಮೂಹಕ್ಕೆ ಸಲ್ಲುತ್ತದೆ. ಇವರು ಸ್ತ್ರೀಯನ್ನು ದೈವೀ ರೂಪದಲ್ಲಿ ಕಾಣುವುದರ ಜೊತೆಗೆ, ಹೆಣ್ಣಿನೊಂದಿಗೆ ಸಂಸಾರಿಗನಾಗಿದ್ದುಕೊಂಡೆ ದೈವೀ ಸಾಕ್ಷಾತ್ಕಾರ ಪಡೆಯಲು ಸಾಧ್ಯ ಎಂದು ಪ್ರತಿಪಾದಿಸಿದವರು ವಚನಕಾರರಾಗಿದ್ದಾರೆ. ವೈದಿಕ ಸಂಸ್ಕೃತಿಯಲ್ಲಿ ಆಳವಾಗಿ ಬೇರೂರಿದ್ದ ಕೀಳು ಭಾವನೆಯನ್ನು, ಅಸಮಾನತೆಯನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಈ ವೀರಶೈವ ಚಳುವಳಿ ಬುನಾದಿ ಹಾಕಿತು. ಬಸವಾದಿ ಶರಣರು ಸ್ತ್ರೀಯರಿಗೆ ಗೌರವ ಕೊಟ್ಟು ಅವರ ಸ್ಥಾನಮಾನವನ್ನು ಪುರುಷರಷ್ಟೇ ಎತ್ತರಕ್ಕೆ ಏರಿಸುವಲ್ಲಿ ಯಶಸ್ವಿಯಾದರು.

"ಎಲ್ಲಿ ಸ್ತ್ರೀಯರು ಪೂಜಿಸಲ್ಪಡುತ್ತಾರೋ, ಅಲ್ಲಿ ದೇವತೆಗಳು ನೆಲೆಸಿರುತ್ತಾರೆ" ಎಂಬ ಪ್ರಾಚೀನ ಹಿಂದೂ ಸಂಸ್ಕೃತಿಯ ಮಾತಿನ ಹಿನ್ನೆಲೆಯಲ್ಲಿ ಹೆಣ್ಣಿನ ಸ್ವಾತಂತ್ರ್ಯ ನಿರಾಕರಿಸಿ ಅವಳೊಂದು ಭೋಗದ ವಸ್ತು ಎಂಬಂತೆ ಈ ಸಮಾಜ, ಚಿಂತಕರು ಹಾಗೂ ಅನುಭಾವಿಗಳು ಕಂಡಿರುವುದನ್ನು ಗುರುತಿಸಬಹುದು.

"ಶೂದ್ರ ವರ್ಗಕ್ಕೆ ಜಮಾವಣೆಗೊಂಡು ದಾಸಿಯೆಂದು, ಭೋಗವಸ್ತುವೆಂದು, ಮೋಕ್ಷಕ್ಕೆ ಅರ್ಹಳಲ್ಲವೆಂದು ಪರಿಗಣಿಸಲಾಗಿದ್ದ ಮಹಿಳೆಗೆ ಜಗತ್ತಿನಲ್ಲಿಯೇ ಮೊಟ್ಟ–ಮೊದಲು ಸರ್ವ ಸ್ವಾತಂತ್ರ್ಯಗಳನ್ನು ಪುರುಷನಿಗೆಣೆಯಾಗಿ ಸಮಾನತೆಯನ್ನು ನೀಡಿದ ಕೀರ್ತಿ ಬಸವಣ್ಣನವರಿಗೆ ಸಲ್ಲಬೇಕು. ಬುದ್ಧ, ಮಹಾವೀರರನ್ನೊಳಗೊಂಡು ಅರಿಸ್ಟಾಟಲ್, ಪ್ಲೇಟೋ, ಸ್ಮೃತಿಕಾರರು, ಆಚಾರ್ಯರು ಹೀಗೆ ತತ್ವಜ್ಞಾನಿಗಳೆಲ್ಲರು ಮುಗ್ಗರಿಸಿರುವಾಗ ಬಸವಣ್ಣನವರೊಬ್ಬರೇ ಸ್ತ್ರೀ ಸಂಕುಲವನ್ನು ಗೌರವಿಸಿದ್ದರೆನ್ನುವ ಸತ್ಯವನ್ನು ಆಧುನಿಕ ಇತಿಹಾಸಕಾರರು ಮತ್ತು ತತ್ವಶಾಸ್ತ್ರಜ್ಞರು ಘೋಷಿಸಬೇಕು"೧

ಎಂದು ಡಾ.ಸಿ.ಸೋಮಶೇಖರ ಅವರ ಮಾತನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು.

ವಚನ ಸಾಹಿತ್ಯದ ನಂತರ ಬಂದ ಸಾಹಿತ್ಯ ದಾಸ ಸಾಹಿತ್ಯವಾಗಿದೆ. ಇಲ್ಲಿಯೂ ಕೂಡ ಮಾಯೆ-ಮೋಹಗಳ ಕುರಿತು ವ್ಯಾಖ್ಯಾನ ನೀಡುವ ಸಂದರ್ಭಗಳಲ್ಲಿ ದಾಸರುಗಳು ಸ್ತ್ರೀಯರನ್ನು ಪ್ರಬಲವಾಗಿ ನಿಂದಿಸಿರುವುದು ನಮಗೆ ಕಂಡುಬರುವುದಿಲ್ಲ. ಜೊತೆಗೆ ಭಕ್ತಿಸಾಹಿತ್ಯದಲ್ಲಿ ಸ್ತ್ರೀಗೆ ಸಮಾನ ಅವಕಾಶಗಳು ಸಿಕ್ಕಿರುವುದನ್ನು ಕಾಣುತ್ತೇವೆ. ದಾಸಸಾಹಿತ್ಯದ ನಂತರದಲ್ಲಿ ಕಂಡುಬರುವ ಸಾಹಿತ್ಯವೆಂದರೆ ಹದಿನೈದನೇ ಶತಮಾನದಲ್ಲಿನ ಕನ್ನಡ ಕೈವಲ್ಯಸಾಹಿತ್ಯವೇ ಆಗಿದೆ. ಈ ಸಾಹಿತ್ಯ ಪರಂಪರೆಯು ಹದಿನೈದನೇ ಶತಮಾನದಿಂದ ಹತ್ತೊಂಬತ್ತನೇ ಶತಮಾನದವರೆಗೆ ಕಂಡುಬರುತ್ತದೆ. ನಿಜಗುಣಶಿವಯೋಗಿಗಳಿಂದ ಈ ಸಾಹಿತ್ಯ ಪರಂಪರೆ ಆರಂಭವಾಗಿ ಶಿಶುನಾಳ ಷರೀಫರ ಕಾಲದ ನಂತರ ಮಂಕಾದುದನ್ನು ಗುರುತಿಸುತ್ತೇವೆ. ಈ ಶರಣರು ರಚಿಸಿದ ಸಾಹಿತ್ಯಕ್ಕೆ ತತ್ವಪದಗಳು ಎಂದು ಕರೆಯುತ್ತಾರೆ. ಕೈವಲ್ಯ ಸಾಹಿತ್ಯ ಪರಂಪರೆಯಲ್ಲಿ ಬರುವ ಶರಣರೆಲ್ಲ ತಮ್ಮ ವೃತ್ತಿಜೀವನದಲ್ಲಿ ಪ್ರಧಾನವಾಗಿ ಒಂದೊಂದು ಮಠದ ಮಠಾಧಿಪತಿಗಳಾಗಿರುತ್ತಾರೆ. ಇವರಲ್ಲಿ ಕೆಲವರು ಹುಟ್ಟಿನಿಂದಲೇ ಸನ್ಯಾಸಿಗಳಾದವರಿದ್ದಾರೆ. ಇನ್ನೂ ಕೆಲವರು ಸಂಸಾರಿಗಳಾಗಿದ್ದು ಅನಂತರ ಸಂಸಾರಸುಖವನ್ನು ತೊರೆದು ವೈರಾಗ್ಯ ತಾಳಿ ಆಧ್ಯಾತ್ಮ ಸಾಧನೆಯಲ್ಲಿ ತೊಡಗಿ ವಿರಕ್ತರಾದವರಿದ್ದಾರೆ. ಇವರೆಲ್ಲರ ನಿಲುವುಗಳು ಒಂದೇ ಆಗಿವೆ. ಆಧ್ಯಾತ್ಮಿಕ ಸಾಧನೆಯ ಸಂದರ್ಭದಲ್ಲಿ ಸ್ತ್ರೀ ನಿಂದನೆಯನ್ನು ಮಾಡುತ್ತಾರೆ ಈ ಶರಣರ ಚಿಂತನೆಗಳಿಗೆ ಕಾರಣ "ಹೆಣ್ಣು ಸಾಂಸಾರಿಕ ಜೀವನ ಜಂಜಡದೊಳಗೆ ಸುತ್ತಿಕೊಳ್ಳುವಂತೆ ಮಾಡುವವಳು ತನ್ನ ರೂಪ ಲಾವಣ್ಯದ ಮೂಲಕ ಯೋಗಿ, ಮಠಾಧೀಶರನ್ನು, ಸಾಧುಸಂತರನ್ನು ಸೋಲಿಸುತ್ತಾಳೆ, ಲೌಕಿಕದ ಆಕರ್ಷಣೆಗೆ ಕಾರಣ ಹೆಣ್ಣೇ. ಜನಿತಕ್ಕೆ ತಾಯಾಗಿ, ಕೂಟಕ್ಕೆ ಪತ್ನಿಯಾಗಿ, ಮೋಹಕ್ಕೆ ಮಗಳಾಗಿ ಹುಟ್ಟಿ ಲೌಕಿಕದ ಆಕರ್ಷಣೆಗೆ ಒಳಗಾಗುವಳು, ಮಹಾಯೋಗಿಗಳನ್ನು ಹೆಣ್ಣು ಸೋಲಿಸಿದೆ"[೨] ಈ ತತ್ವದಡಿಯಲ್ಲಿ ಶರಣರೆಲ್ಲರೂ ಸ್ತ್ರೀನಿಂದನೆಯಲ್ಲಿ ತೊಡಗಿದ್ದಾರೆ.

ವೀರಶೈವ ಚಳುವಳಿಯು ಹೆಣ್ಣು ಮಾಯೆಯಲ್ಲ, ಆತ್ಮಕ್ಕೆ ಲಿಂಗಭೇದವಿಲ್ಲ, ಹೆಣ್ಣು ಅಸ್ಪೃಶ್ಯಳಲ್ಲ, ಹೆಣ್ಣು ಪ್ರತ್ಯಕ್ಷದೇವತೆ ಎಂದು ಸಾರಿ ಹೋಗಿದ್ದರು ಕೂಡ ಕನ್ನಡ ಕೈವಲ್ಯ ಸಾಹಿತ್ಯದ ಶರಣರು, ಅನುಭಾವಿಗಳು ಆಧ್ಯಾತ್ಮಿಕ ಸಾಧನೆಯ ಸಂದರ್ಭದಲ್ಲಿ ಸ್ತ್ರೀ ನಿಂದನೆಯನ್ನು ಮಾಡುತ್ತಾರೆ. ಹೆಣ್ಣನ್ನು ಪ್ರಬಲ ಮಾಯೆ ಎನ್ನುತ್ತಾರೆ. ಪುರುಷನ ಆತ್ಮೋನ್ನತಿಗೆ ಅಡ್ಡಿಮಾಡಿ ತನ್ನ ಹಿಂದೆಯೇ ಸುತ್ತಿಸುವವಳು, ಚಂಚಲತೆಯ ಪ್ರತೀಕ, ಸೋಮಾರಿತನ, ಅಸ್ಥಿರತೆ ಅವಳ ವ್ಯಕ್ತಿತ್ವದ ಒಂದು ಅಂಗವಾಗಿಯೇ ಬಂದಿದೆ. ಸುಖಲೋಲುಪತೆ, ವಂಚನೆ, ಮೋಸ ಹೆಣ್ಣಿನ ಸಹಜಗುಣ ಒಟ್ಟಾರೆ ಹೆಣ್ಣು ಅತೃಪ್ತಳು ಎಂಬಂತೆ ತಮ್ಮ ಕೃತಿಗಳಲ್ಲಿ ಸ್ತ್ರೀನಿಂದನೆಯನ್ನು ಮಾಡಿದ್ದಾರೆ.

ಒಂದೆಡೆ ಆಧ್ಯಾತ್ಮಿಕ ಸಾಧನೆಗೆ ಹೆಣ್ಣು ಅಡ್ಡಿ ಎಂದು ಪ್ರತಿಪಾದಿಸಿದ ಶರಣರು ಅದೇ ಆಧ್ಯಾತ್ಮಿಕ ಸಾಧನೆಯಲ್ಲಿ ಪಂಚೇಂದ್ರಿಯಗಳ ನಿಗ್ರಹಕ್ಕೆ ನಿರ್ವಾಣಭಿಕ್ಷೆಗಾಗಿ ದೇವಿಯಾದ ಪಾರ್ವತಿಯನ್ನು ಸ್ತುತಿಸುತ್ತಾರೆ. ಸಾಮಾನ್ಯಸ್ತ್ರೀಯನ್ನು ನಿಂದಿಸಿದ ಅವಗುಣಗಳೆಲ್ಲಾ ದೇವಿ ಸ್ತುತಿಯ ಸಂದರ್ಭಗಳಲ್ಲಿ ಗುಣಗಾನಗಳಾಗಿ ಕಂಡುಬರುವ ಮೂಲಕ ಶರಣರ ನಿಲುವುಗಳು ಭಿನ್ನವಾಗಿವೆ. ದ್ವಂದ್ವಾತ್ಮಕತೆಯಿಂದ ಕೂಡಿದೆ. ಭಕ್ತ ಮತ್ತು ಭಗವಂತನ ನಡುವಣ ಸಾಮರಸ್ಯಕ್ಕಾಗಿ ಶಿವಧ್ಯಾನದಲ್ಲಿ ಮುಳುಗಿದ ಶರಣರು ಪ್ರಬಲವಾಗಿ ನಿಂದಿಸಿದ್ದು, ತಿರಸ್ಕರಿಸಿದ್ದು, ತಮ್ಮ ಪಂಚೇಂದ್ರಿಯಗಳನ್ನಲ್ಲ ಬದಲಾಗಿ ಸ್ತ್ರೀಯನ್ನಿರಬೇಕೆಂದು ಇವರ ತತ್ವಪದಗಳನ್ನು ಅವಲೋಕನ ಮಾಡಿದಾಗ ಅನಿಸುತ್ತದೆ. ಶರಣರು ತಮ್ಮ ಮಾನಸಿಕ ತುಮುಲವನ್ನು ದೂರ ಮಾಡಿಕೊಳ್ಳುವುದಕ್ಕೋಸ್ಕರ ಸ್ತ್ರೀನಿಂದನೆ ಮಾಡಿರುವುದು ಇಲ್ಲಿ ಕಂಡುಬರುತ್ತದೆ.

ಕನ್ನಡ ಕೈವಲ್ಯ ಸಾಹಿತ್ಯದ ಆದಿಪ್ರವರ್ತಕರಾಗಿ ನಿಜಗುಣ ಶಿವಯೋಗಿಗಳು ಕಂಡುಬರುತ್ತಾರೆ. ಇವರ 'ಕೈವಲ್ಯ ಪದ್ಧತಿ' ಎಂಬ ಕೃತಿಯಲ್ಲಿ ಸ್ತ್ರೀಯನ್ನು ಈ ರೀತಿ ಕಂಡರಿಸಿದ್ದಾರೆ.

> "ಎಲೆ ಮನುಜ, ನೀ ಬಯಸುವ ಹೆಣ್ಣಿನಲ್ಲಿ ಲವಲೇಶವಾದರೂ
> ಲೇಸಿದೆಯೇ ಗುಂಡಾದ ಮೊಲೆಯ ಮಾಂಸದುಂಡೆಯನ್ನು
> ನೀಳವಾದ ಗುಂಗುರುಳ ಮುಡಿಯನ್ನು, ಹಂದರ ಕಟ್ಟಿರುವ ಅಸ್ಥಿಪಂಜರವನ್ನು
> ಮುಸುಕಿರುವ ಹಸಿ ಚರ್ಮವನ್ನು ಹಲವೆಡೆ ಹಬ್ಬಿರುವ
> ನರನಾಡಿಯನ್ನು ಒಂದೊಂದಾಗಿ ಹುಡುಕಿ ನೋಡು ನೀ
> ಬಯಸುವ ಹೆಣ್ಣಿನಲ್ಲಿ ಲವಲೇಶವಾದರೂ
> ಲೇಸಿದೆಯೇ"[೩]

ಇಲ್ಲಿ ನಿಜಗುಣ ಶಿವಯೋಗಿಗಳು "ಹೆಣ್ಣಾಗಿ ಹುಟ್ಟಿದ್ದೇ ಸಮಸ್ಯೆಯಾಗಬಲ್ಲದು ಪ್ರಸ್ತುತ ಪರಿಸ್ಥಿತಿಯಲ್ಲಿ ಅವಳು ಬೆಳೆದು ದೊಡ್ಡವಳಾಗಿ ಮುಪ್ಪಾಗುವ ತನಕ ಪುರುಷ ಕಾಣದ ಕೆಲವು ವಿಶಿಷ್ಟ ಅನುಭವಗಳನ್ನು ಪಡೆಯುತ್ತಾಳೆ ಮುಟ್ಟು, ಗರ್ಭ, ಹೆರಿಗೆ ಮುಂತಾದವು ದೈಹಿಕ ವೈಶಿಷ್ಟ್ಯಗಳಾದರೆ, ಲಜ್ಜೆ, ಭಯ, ಸಂಕೋಚ, ಕೀಳರಿಮೆ, ತಾಯ್ತನದ ಹೊಣೆ ಇವು ಬಹುತೇಕ ಪರಿಸರ ನಿರ್ಮಿತ" [೪] ವಾದವುಗಳಗಿವೆ. ಈ ರೀತಿ ಮಹಿಳೆ ಪಡೆದ ನಿಸರ್ಗದತ್ತವಾದ ವರಗಳನ್ನು ಶಾಪವೆಂದು, ಸೂತಕವೆಂದು ತಮ್ಮ ತತ್ವಪದಗಳಲ್ಲಿ ಪ್ರತಿಬಿಂಬಿಸಿದ್ದಾರೆ.

ಸರ್ಪಭೂಷಣ ಶಿವಯೋಗಿಗಳು ತಮ್ಮ 'ಕೈವಲ್ಯ ಕಲ್ಪವಲ್ಲರಿ' ಕೃತಿಯೊಳಗೆ ಸ್ತ್ರೀನಿಂದನೆಯ ಮಾತುಗಳು ಈ ಕೆಳಗಿನಂತಿವೆ.

> "ಧರೆಯೊಳೇ ಹೆಣ್ಣು ರಾಕ್ಷಸಿಯಲ್ಲದಿನ್ನಂಟೆ
> ನರರು ಬೇರಿಹುದೆಂದು ಪೇಳುವುದು ಪುಸಿಯು"
> "ಹೆಣ್ಣಿಗಿಚ್ಛೈಸುವರೇ ಮೂಢಾ ಇದನು
> ಕಣ್ಣು, ಕಿವಿ, ಮೈಮನಗಳು ಸೋಂಕ ಬೇಡ" [೫]

ಈ ತತ್ವಪದಗಳಲ್ಲಿ ಮೂಢನಾದ ಜೀವನವೇ ಹೆಣ್ಣಿಗೆ ಆಸೆಪಡಬೇಡ, ಹೆಣ್ಣನ್ನು ಕಡೆಗಣ್ಣಿನಿಂದ ನೋಡಬೇಡ, ಕಿವಿಯಿಂದ ಅವಳ ನುಡಿಕೇಳಬೇಡ, ಮನಸ್ಸಿನಲ್ಲಿ ನೆನೆಯಬೇಡ, ಹೆಣ್ಣು ಮಾಯೆಯಾಗಿ ಬಹುವಿಧವಾಗಿ ನಿನ್ನನ್ನು ಜೀವನ ಪರ್ಯಂತ ಕಾಡುತ್ತಾಳೆ ಎನ್ನುತ್ತಾರೆ. ಈ ಶರಣರ ನಿಲುವು ಸ್ತ್ರೀಯು ತನ್ನ ವೈಯುಕ್ತಿಕ ಆಸೆ-ಆಕಾಂಕ್ಷೆ, ಅನಿಸಿಕೆ, ಬಳಲಿಕೆ, ಸಹಜ ಕಾಮನೆ, ಸ್ವಾತಂತ್ರ್ಯ ಇವುಗಳನ್ನು ಬದಿಗೊತ್ತಿ ಸದಾ ಕುಟುಂಬದ ಹಿತಕ್ಕಾಗಿ ಒದ್ದಾಡುವ ಸ್ತ್ರೀಯ ಮನಸ್ಥಿಗೆ, ಅವಳ ತಾಕಲಾಟಕ್ಕೆ ಬೆಲೆಕೊಡದೆ ಅತಿ ನಿಕೃಷ್ಟವಾಗಿ ನಿಂದಿಸಿರುವುದನ್ನು ಕಾಣುತ್ತೇವೆ.

ಈ ಪರಂಪರೆಯಲ್ಲಿ ಬಂದ ಮತ್ತೊಬ್ಬ ಶರಣರು ಮುಪ್ಪಿನ ಷಡಕ್ಷರಿಗಳು ತಮ್ಮ 'ಸುಭೋಧ ಸಾರ' ಕೃತಿಯಲ್ಲಿ ಸ್ತ್ರೀ ಕುರಿತ ನಿಲುವುಗಳನ್ನು ಈ ರೀತಿ ಬಿಂಬಿಸಿದ್ದಾರೆ.

"ನಿನ್ನೊಳಗೆ ಕಾಲನಿಹ
ನಿನ್ನೊಳಗೆ ಕಾಮನಿಹ
ನಿನ್ನೊಳಗೆ ನೇಣುಕತ್ತರಿಗಳಿಹವು
ನಿನ್ನೊಳಗೆ ವಿಷವಿಹುದು
ನಿನ್ನೊಳಗೆ ನರಕಗಳು" ೬

ಎಂಬ ತತ್ವಪದದಲ್ಲಿ ಮಾಡಿದ ಸ್ತ್ರೀ ನಿಂದನೆಯು ವಾಸ್ತವವಾದ ಸ್ತ್ರೀವಾದಿ ನಿಲುವುಗಳಿಗೆ ವಿರೋಧವಾದವುಗಳಾಗಿವೆ. ವಾಸ್ತವ ಜಗತ್ತಿನಲ್ಲಿ ಮಾಯೆ ಕೇವಲ ಸ್ತ್ರೀಗೆ ಅಂಟಿದ ಕಳಂಕವಲ್ಲ. ಬದಲಾಗಿ ಅದು ಪುರಷನ ಚಿಂತನೆಯಲ್ಲಿ ಅಡಗಿದೆ. ಇವರ ಚಿಂತನಾ ಲಹರಿಯು ತತ್ವ ಪದಗಳ ಮೂಲಕ ಅಭಿವ್ಯಕ್ತಗೊಂಡ ವಾಸ್ತವ ವಿರೋಧಿ ನಿಲುವುಗಳಾಗಿ ಕಂಡು ಬಂದಿವೆ.
ಬಾಲಲೀಲಾ ಮಹಾಂತ ಶಿವಯೋಗಿಗಳು ತಮ್ಮ 'ಕೈವಲ್ಯ ದರ್ಪಣ' ಕೃತಿಯಲ್ಲಿ ಸ್ತ್ರೀ ಕುರಿತು ಹೀಗೆ ಹೇಳಿದ್ದಾರೆ.

"ಎರಗದಿರು ಮನವೆ ನೀ ತನು ವರ್ಣವನು ನೋಡಿ
ತೆರೆಯ ಹುಳುಕುಂಟು ಗುಣವಿಲ್ಲ ನಾರಿಯೊಳು
ಒಳಗೆ ನರ ಮಾಂಸ ಮಜ್ಜದ ಪುಂಜಗಳನ್ನು ಎತ್ತಿ
ಮಲಿನ ಚರ್ಮದ ಹೊದಿಕೆ ಬೇರಿಲ್ಲವು" ೭

ಈ ತತ್ವ ಪದಗಳಲ್ಲಿ ಶರಣರು ಹೆಣ್ಣು ಸಾಧಕರನ್ನು ಸಾಂಸಾರಿಕ ಜೀವನದ ಜಂಜಡದೊಳಗೆ ಸಿಲುಕಿಸಿ ಸುತ್ತಿಸಿಕೊಳ್ಳುವಂತೆ ಮಾಡುತ್ತಾಳೆ. ತನ್ನ ಚೆಲುವು, ಯೌವ್ವನ ಆಕರ್ಷಣೆಗಳ ಮೂಲಕ ಸ್ತ್ರೀ ಜಗತ್ತಿನ ದಾರ್ಶನಿಕರನ್ನು, ವಿರಕ್ತರನ್ನು, ಶಿವಯೋಗಿಗಳನ್ನು, ಮಠಾಧೀಶರನ್ನು, ಸಾಧುಸಂತರನ್ನು ತನ್ನ ಮಾಯಾವಿತನದಿಂದ ಸೋಲಿಸುತ್ತಾಳೆ ಎನ್ನುತ್ತಾರೆ.
ಕೂಡ್ಲೂರು ಬಸವಲಿಂಗ ಶರಣರು ಕೂಡ ತಮ್ಮ ತತ್ವಪದಗಳಲ್ಲಿ ಸ್ತ್ರೀ ವಿರೋಧಿ ನಿಲುವುಗಳನ್ನು ಹೀಗೆ ವ್ಯಕ್ತ ಪಡಿಸಿದ್ದಾರೆ.

"ನಂಬಬಾರದು ರಂಭೆಯ ಮಾತ
ನಂಬಬಾರದು ಚೆಲುವೆಯ ಕುಂಭ-ಕುಚೆಯಳಲ್ಲಿ
ಒಲವ ತೋರಿ ಅವಳ ಎಲ್ಲ ನೆಲೆಯ ತಿಳಕೊ
ಹೆಣ್ಣು ನಿನ್ನವಳೆನ್ನಬೇಡವೋ" ೮

ಈ ತತ್ವ ಪದಗಳಲ್ಲಿ ಸ್ತ್ರೀಯ ಹಿಂದೆ ಹೋದರೆ ಮಣ್ಣು ತಿನ್ನಿಸಿ, ಸುಲಿಗೆ ಮಾಡಿ, ಎಣ್ಣೆ ಇಲ್ಲದೇ ಕುದಿಸುವಳು, ಕೊನೆಗೆ ನಿನ್ನ ಬಳಿ ಅರ್ಥ ತೀರಿದ ಬಳಿಕ ಕುನ್ನಿಯಂತೆ ಬೀದಿಗಟ್ಟುವಳು ಎಂದು ನಿಂದಿಸುತ್ತಾರೆ. ಇಲ್ಲೆಲ್ಲಾ ಈ ಶರಣರ ನಿಲುವುಗಳು ಹೆಣ್ಣನ್ನು ಕೀಳು ದೃಷ್ಟಿಯಲ್ಲಿ ಕಾಣುವುದೇ ಅಲ್ಲದೇ ಭೋಗದ ವಸ್ತುವನ್ನಾಗಿ ಚಿತ್ರಿಸಲಾಗಿದೆ.
ನಂತರ ಇದೇ ಪರಂಪರೆಯಲ್ಲಿ ಬರುವ ಕಡಕೋಳದ ಮಡಿವಾಳ ಶಿವಯೋಗಿಗಳು ತಮ್ಮ ತತ್ವ ಪದಗಳಲ್ಲಿ ಮಾಯೆಯನ್ನು ವರ್ಣಿಸುವಾಗ ಈ ರೀತಿ ಹೇಳುತ್ತಾರೆ.

"ಕಂಡಾ ಬಟ್ಟಿ ಮಾತುಗಳ ಆಡಕಲ್ತಿ । ಮಿಂಡ್ರ ನೋಡವಲ್ತಿ
ಗಂಡನ ಮ್ಯಾಲ್ಯಾಕ ಪೋರಿ ನಿನ್ನ ಚೆಲ್ತಿ । ಛೀ! ಮೂಳ ಹೊಲ್ತಿ"೯

ಇಲ್ಲಿ ಹೆಣ್ಣನ್ನು ಪಾತಿವ್ರತ್ಯದ ಧರ್ಮಕ್ಕೆ ಕಟ್ಟಿ ಹಾಕಿ ಕಣ್ಣ ಮುಂದೆ ಕಂಡ ಒಬ್ಬ ಸ್ತ್ರೀಯ ಲೋಪವನ್ನು, ಕಳಂಕವನ್ನು ಇಡೀ ಸ್ತ್ರೀ ಸಂಕುಲಕ್ಕೆ ಅನ್ವಯಿಸಿ ನೋಡುವ ಪ್ರಯತ್ನ ಮಾಡಿದ್ದಾರೆ.
ಹೀಗೆ ಕನ್ನಡ ಕೈವಲ್ಯ ಪರಂಪರೆಯಲ್ಲಿ ನವಲಗುಂದದ ನಾಗಲಿಂಗಪ್ಪ, ಗರಗದ ಮಡಿವಾಳಪ್ಪ, ಇಮ್ಮಡಿ ಮುರುಗಾ ಗುರುಸಿದ್ದರು, ಘನಮಠದ ಸ್ವಾಮಿಗಳು ಮುಂತಾದವರ ತತ್ವಪದಗಳಲ್ಲಿ ಇದೇ ಮಾದರಿಯಾಗಿ ಸ್ತ್ರೀ ವಿರೋಧಿ ನಿಲುವುಗಳು ಕಂಡು ಬರುತ್ತವೆ.
೧೯ ನೇ ಶತಮಾನದ ಜನಪ್ರಿಯ ಸಂತರಾದ, ಅನುಭಾವಿಗಳಾದ ಶಿಶುನಾಳ ಷರೀಫರೂ ಕೂಡಾ ಆ ಕಾಲದ ಸ್ತ್ರೀಯ ಮೌಲ್ಯಗಳನ್ನು ಅರಿತಿದ್ದರೂ ಆಧ್ಯಾತ್ಮಿಕ ಚಿಂತನೆಯ ಸಂದರ್ಭದಲ್ಲಿ ಹೀಗೆ ಸ್ತ್ರೀಯನ್ನು ವಿರೋಧದ ದೃಷ್ಟಿ ಕೋನದಲ್ಲಿ ಕಾಣುತ್ತಾರೆ.

"ಹುಚ್ಚು ನಾಯಿ ಬಂದು ಕಚ್ಚುತಿಹುದು ತಂಗಿ ಎಚ್ಚರದಲಿ ನಡಿ ದಾರಿ ಹಿಡಿ"
"ಬೀಳಬಾರದು ಹೆಂಗಸಿನ ಬಲಿಯೊಳಗೆ ಬಿಡು-ಬಿಡು ಈ ನಡತಿ"
"ಗರತಿ ಲಕ್ಷಣ ಹೋದ ಮ್ಯಾಲಿನ್ನು ತಿರುಗಿ ಗರತ್ಯಾಗಬಹುದೆ"
"ಕಾಣದೇ ನೀ ಬೊಗಳಬ್ಯಾಡ, ಕೋಣನಂತೆ ರಂಡಿ" ೧೦

ಇಲ್ಲಿ ಸ್ತ್ರೀಯನ್ನು ಪ್ರಬಲವಾಗಿ ಅವಳ ಗುಣಾವಗುಣಗಳನ್ನವಲಂಬಿಸಿ ಚಿತ್ರಿಸಿದ್ದಾರೆ. ಅಲ್ಲದೇ ಇಂದ್ರ, ಪಾಂಡು ಪುತ್ರರನ್ನೆಲ್ಲ ಹೆಣ್ಣು ತಿರುಕರ ರೀತಿ ತಿರುಗಾಡಿಸಿದೆ. ಸ್ತ್ರೀ ಹಿಂದೆ ಹೋದ ಅವರ ಗತಿ ಏನಾಯಿತು ಎಂಬುದನ್ನು ಹೇಳುತ್ತಲೇ ವಿಷಯ ಸುಖಕ್ಕೆ ಕಾರಣಳಾದ ಸ್ತ್ರೀಯನ್ನು ದೂರವಿಡುವಂತೆ ಉಪದೇಶ ಮಾಡುತ್ತಾರೆ.
ಹೀಗೆ ಇಲ್ಲಿನ ಶರಣರೆಲ್ಲರೂ ಕೂಡಾ ಸ್ತ್ರೀಯನ್ನು ನಿಂದಿಸುವ, ಸ್ತ್ರೀ ವರ್ತನೆಯನ್ನು ಖಂಡಿಸಿ ತಿದ್ದಿ ಬುದ್ಧಿ ಹೇಳುವ ಕೆಲಸವನ್ನು ತಮ್ಮ ತತ್ವ ಪದಗಳ ಮೂಲಕ ಮಾಡಿದ್ದಾರೆ. ಈ ಶರಣರ ಚಿಂತನೆಯೆಲ್ಲ 'ನರನಿಗೆ ನಾರಿಗಿಂತ ಬೇರೆ ವೈರಿಯಿಲ್ಲ' ಎಂಬ ನಾಣ್ಣುಡಿಗೆ ತಕ್ಕ ನಿಲುವುಗಳಾಗಿವೆ.
ಪ್ರಪಂಚದಲ್ಲಿ ಅನಾದಿ ಕಾಲದಿಂದಲೂ ಸುಪ್ರಸಿದ್ಧ ದಾರ್ಶನಿಕರೂ, ಶರಣರೂ, ಪ್ರವಾದಿಗಳೂ, ಸಾಧಕರೂ, ಸಂಸಾರಿಗಳೂ, ವಿರಾಗಿಗಳೂ ಹೆಣ್ಣನ್ನು ಒಂದಲ್ಲ ಒಂದು ರೀತಿಯಲ್ಲಿ ನಿಂದಿಸುತ್ತಾ ಬಂದಿದ್ದಾರೆ. ಇವರುಗಳ ಸಾಲಿನಲ್ಲಿ ಜ್ಞಾನಿಗಳ ಸ್ಥಾನದಲ್ಲಿದ್ದೂ ಸ್ತ್ರೀ ಸ್ವಾತಂತ್ರ್ಯದ ಅರಿವಿದ್ದರೂ ಕೂಡಾ ಕೈವಲ್ಯ ಸಾಹಿತ್ಯದ ಶರಣರೂ ಸ್ತ್ರೀ ವಿರೋಧಿಯಾಗಿ ಕಾಣುತ್ತಾರೆ.
೧೩ನೇ ಶತಮಾನದ ಹೊತ್ತಿಗೆ ಸ್ತ್ರೀ ಪರ ಹೋರಾಟಗಳು, ಸಂಘಟನೆಗಳು ಸ್ತ್ರೀ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವ ಹಾಗೂ ಸ್ತ್ರೀ ಬರಹಗಾರ್ತಿಯರು ಕಂಡು ಬರುವ ಇಂತಹ ಕಾಲಘಟ್ಟದಲ್ಲಿ ಕಂಡು ಬಂದ ಶರಣರ ಚಿಂತನೆಗಳು ಗಂಭೀರವಾಗಿವೆ. ಈ ಲೇಖನದ ಒಟ್ಟಾರೆ ಆಶಯ ಶರಣರ ನಿಲುವುಗಳಲ್ಲಿರುವ ಭಿನ್ನತೆಗೆ ಪ್ರಮುಖ ಕಾರಣ ಅವರವರ ಮನೋಧರ್ಮವೇ ಹೊರತು ಸ್ತ್ರೀ ಅಲ್ಲ ಎಂಬುದಾಗಿದೆ. ಸ್ತ್ರೀ ಎಂದೂ ಪುರುಷನ ಬಾಳಿಗೆ ಮುಳುವಾಗಲಾರಳು ಬದಲಾಗಿ ಅವನ ಆತ್ಮೋನ್ನತ್ತಿಗೆ ಸಹಕಾರಿಯಾಗುವಳೆಂಬುದನ್ನು ಈ ಶರಣ ಪರಂಪರೆ ಮರೆತಂತಿದೆ. ಈ ಸಾಹಿತ್ಯವು ಅನುಭಾವಿಗಳಿಂದ ರಚಿತವಾದ ಸಾಹಿತ್ಯವಾಗಿದ್ದು ಈ ಶರಣರು ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿ ಮೋಕ್ಷ ಪಡೆಯುವ ಅಂಚಿನಲ್ಲಿದ್ದವರಾದ್ದರಿಂದ ಸಂಸಾರದಿಂದ ಹಾಗೂ ಸ್ತ್ರೀಯರ ಬಂಧನದಿಂದ ಕಾಮ ಮೋಹಗಳಿಂದ

ಬಿಡುಗಡೆ ಹೊಂದುವ ಸಲುವಾಗಿ ಸ್ತ್ರೀ ನಿಂದನೆಯನ್ನು ಮಾಡಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ ಈ ಶರಣ ಪರಂಪರೆ ಹೆಣ್ಣು–ಗಂಡುಗಳ ನಡುವಿನ ಸಮಾನ ಶಕ್ತಿಯೊಂದನ್ನು ಆತ್ಮ, ಪ್ರಾಣ, ಜ್ಞಾನ ಮತ್ತು ಅರಿವುಗಳೆಂಬ ಪದಗಳಿಂದ ಸೂಚಿಸುವಂತಾಗದೆ ಬದಲಿಗೆ ನಿರ್ಲಿಂಗೀಯ ನೆಲೆಯಿಂದ ಶರೀರಜನ್ಯ ವ್ಯತ್ಯಾಸವನ್ನು ಈ ಶರಣರು ಗುರುತಿಸಿದ್ದು, ಪ್ರಸ್ತುತ ಸಂದರ್ಭಕ್ಕೆ ಅರ್ಥಹೀನವಾಗಿದೆ ಎನ್ನಬಹುದು. ಇಂತಹ ಶರೀರಜನ್ಯ ಸ್ಥಿತಿಯನ್ನು ಪ್ರತಿಪಾದನೆ ಮಾಡಿ ತಮ್ಮ ಮನದ ಭಾವನೆಯನ್ನು ಮೀರಲು ಶರಣರಿಗೆ ಸಾಧ್ಯವಾಗದೇ ಹೋದದ್ದು ದುರಂತವೆನಿಸುತ್ತದೆ.

ಈ ಶರಣರು ವಾಸ್ತವ ಸಮಸ್ಯೆಗಳಿಗೆ ಆಧ್ಯಾತ್ಮದಲ್ಲಿ ಪರಿಹಾರ ಕಂಡುಕೊಂಡರು "ಒಂದು ಸಮುದಾಯವಿಡೀ ಒಟ್ಟಾಗಿ ನಿಂತು ಒಂದು ಗುರಿಯತ್ತ ಶ್ರಮಿಸಿದ್ದಂತಹ ಪರಿಸರದಲ್ಲಿ ಆ ಮಹಿಳೆಯರ ಪ್ರತಿಭೆ ಕ್ರಿಯಾಶಕ್ತಿ ಪ್ರಖರವಾಗಿ ಬೆಳಕಿಗೆ ಬಂತು. ಶಿವ ಶರಣರ ಆಂದೋಲನದ ಕಾವು ತಗ್ಗಿ, ರಾಜಕೀಯಕ್ಕೆ ಆಧ್ಯಾತ್ಮಿಕ ಕಳಕಳಿ ಬಲಿಯಾಗತೊಡಗಿದಾಗ, ಸಮಾಜದ ಗುಪ್ತ, ಸುಪ್ತ ವಲಯಗಳಲ್ಲಿ ಮೈಗೂಡಿದ್ದ ಜನಶಕ್ತಿ ಕರಗಿ ಹೋದಂತೆ, ಮಠ–ಮಾನ್ಯಗಳು ತಲೆಯೆತ್ತಿ ಶರಣ ಧರ್ಮವು ವೀರಶೈವ ಮತವಾದಾಗ, ಹಳೆಯ ಪಿತೃ–ಪ್ರಧಾನ ಮೌಲ್ಯಗಳು ತಮ್ಮ ಹಿಡಿತ ಸಾಧಿಸಿದವು"[೧೧]

ಈ ನಿಟ್ಟಿನಲ್ಲಿ ಮುಂದೆ ಬಂದ ಕನ್ನಡ ಕೈವಲ್ಯ ಸಾಹಿತ್ಯದ ಸಂದರ್ಭದಲ್ಲಿ ಸ್ತ್ರೀಯ ಪ್ರಗತಿ, ಪ್ರತಿಭೆ ಮಂಕಾಗಿ ಸ್ತ್ರೀಯು ಕೇವಲ ಗೃಹ ಕೃತ್ಯಗಳಲ್ಲಿ ಮಾತ್ರ ಕಾಣಿಸಿಕೊಂಡಿರಬೇಕು ಇದರ ಫಲವೇ ಕೈವಲ್ಯ ಸಾಹಿತ್ಯದ ಶರಣರ ಚಿಂತನೆಯಲ್ಲಿ ಮೂಡಿಬಂದಿದೆ ಎಂದು ಹೇಳಬಹುದು.

**ಕೊನೆಟಿಪ್ಪಣಿ**


1. ಡಾ.ಸಿ.ಸೋಮಶೇಖರ : "ವಚನಗಳಲ್ಲಿ ಸಾಮಾಜಿಕ ಚಿಂತನೆ" ಪುಟ–೧೩ ಮತ್ತು ೧೪
   ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು. ೨೦೧೪
2. ಡಾ.ಶೈಲಜಾ ಉಡಚಣ : "ವಚನಗಳಲ್ಲಿ ಮಾಯೆ ಸಂಸಾರ" ಪುಟ–೨೧
   ಶ್ರೀ ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್, ಬೆಂಗಳೂರು. ೨೦೦೩
3. ಡಾ. ಎಲ್. ಬಸವರಾಜು : "ನಿಜಗುಣ ಶಿವಯೋಗಿಯ ತತ್ವದರ್ಶನ" ಪುಟ–೩೭೫
   ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು. ೨೦೦೪.
4. ಎನ್.ಗಾಯಿತ್ರಿ : "ಮಹಿಳೆ ಬಿಡುಗಡೆಯ ಹಾದಿಯಲ್ಲಿ" ಪುಟ–೧೩ ಮತ್ತು ೧೪
5. ಶ್ರೀಮತಿ ವಿಶಾಲಾಕ್ಷಾಂಬತಾಯಿ, ಪಂ.ವೇ.ತೋಟಪ್ಪಯ್ಯ ಶಾಸ್ತ್ರೀಜಿ ಹಿರೇಮಠ: "ಸಟೀಕಾ ಕೈವಲ್ಯ ಕಲ್ಪವಲ್ಲರಿ" ಪುಟ ೫೭ ಮತ್ತು ೫೮
   ಶ್ರೀ ತೋಂಟಾದಾರ್ಯ ಬುಕ್ ಡಿಪೋ, ಗದಗ.
6. ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ಸಂ : "ಮುಪ್ಪಿನ ಷಡಕ್ಷರಿಗಳ ಕೈವಲ್ಯ
   ಪದಗಳು" ಪುಟ ೧೯,ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು. ೧೯೬೮
7. ಲಿಂ. ಪೂ. ಶಿ. ಶಿ. ಬಸವನಾಳ ಸಂ : "ಕೈವಲ್ಯ ದರ್ಪಣ" ಪುಟ ೬
   ಶ್ರೀ ಮುರುಘಾಮಠ, ಮೃತ್ಯುಂಜಯ ನಗರ, ಧಾರವಾಡ. ೧೯೯೦
8. ಶ್ರೀ ಡಿ. ಎಸ್. ಕುಮಾರ ಸಂ: "ಶ್ರೀ ಕೂಡ್ಲೂರು ಬಸವಲಿಂಗರ ತತ್ವ ಪದಗಳು" ಭಾಗ–೩
   ಪುಟ ೪೮ ಮತ್ತು ೪೯
9. ಎ. ಕೆ. ರಾಮೇಶ್ವರ ಸಂ: ಶ್ರೀ ಕಡಕೋಳ ಮಡಿವಾಳೇಶ್ವರರ ತತ್ವಪದಗಳ ಸಂಗ್ರಹ ಮಾಲೆ.
   ಭಾಗ–೨ ಪುಟ ೧೯ ಮತ್ತು ೨೦
10. ಪಿ. ಸಿ. ಶಾಬಾದಿಮಠ ಬುಕ್ ಡಿಪೋ, ಗದಗ :ಸಂತ ಶಿಶುನಾಳ ಷರೀಫರ ತತ್ವ ಪದಗಳು.
    ಪುಟ ೩೨ ಮತ್ತು ೫೪
11. ಬಿ. ಎಸ್. ಸುಮಿತ್ರಾಬಾಯಿ : ವಚನಗಳಲ್ಲಿ ಮಹಿಳಾ ದೃಷ್ಟಿಕೋನ (ಲೇ) ಪುಟ–೩೨೦
    (ವೀರಶೈವ ಧರ್ಮದರ್ಶನ), ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು. ೨೦೦೫